# ಬೃಹತ್ ಭಗವದ್ಗೀತೆ!



ಭಗವದ್ಗೀತೆಯು ಮಹಾಭಾರತದಲ್ಲಿನ ಕುರುಕ್ಷೇತ್ರ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಕೃಷ್ಣನಿಂದ ಅರ್ಜುನನಿಗೆ ಮಾಡಲ್ಪಟ್ಟ ಉಪದೇಶ. ಹಿಂದೂಗಳ ಪವಿತ್ರ ಗ್ರಂಥಗಳಲ್ಲಿ ಇದು ಮುಖ್ಯವಾದುದು ಎಂಬುದು ಎಲ್ಲರಿಗೂ ತಿಳಿದ ಸಂಗತಿ.

'ಭಗವದ್ಗೀತೆ' ಆರಂಭವಾಗುವುದು ಮಹಾಭಾರತ ಯುದ್ಧದ ಆರಂಭವಾಗುವ ಮೊದಲು. ತಮ್ಮ ಸೈನ್ಯಕ್ಕೆ ರಣಭೂಮಿಯಲ್ಲಿ ಎದುರಾದ ಕೌರವರ ಸೇನೆಯಲ್ಲಿ ತನ್ನ ಬಹಳಷ್ಟು ಬಂಧುಗಳನ್ನು ಕಂಡು ಅರ್ಜುನ ಉತ್ಸಾಹ ಕಳೆದುಕೊಂಡು ಮಾರ್ಗದರ್ಶನಕ್ಕಾಗಿ ಕೃಷ್ಣನತ್ತ ತಿರುಗಿದಾಗ, ಆತ್ಮದ ಅಮರತ್ವದ ಬಗ್ಗೆ ಪ್ರಸ್ತಾಪಿಸುತ್ತ ಕೃಷ್ಣ 'ಗೀತೋಪದೇಶ'ವನ್ನು ಆರಂಭಿಸುತ್ತಾನೆ. ಇದರ ನಂತರ ನಾಲ್ಕು ಯೋಗಮಾರ್ಗಗಳಾದ ಭಕ್ತಿ, ಕರ್ಮ, ಧ್ಯಾನ ಮತ್ತು ಜ್ಞಾನ ಮಾರ್ಗಗಳನ್ನು ವಿವರಿಸುತ್ತಾನೆ. ಇದನ್ನು ಶ್ರೀಕೃಷ್ಣನು ಅರ್ಜುನನಿಗೆ ಮಾರ್ಗಶಿರ ಮಾಸದ ಶುಕ್ಲಪಕ್ಷದ ಏಕಾದಶಿಯ ದಿನ ಉಪದೇಶಿಸಿದ ಎನ್ನುತ್ತದೆ ಇತಿಹಾಸ. ಆದುದರಿಂದ ಇದನ್ನು 'ಗೀತಾ ಜಯಂತಿ' ಎಂದು ಕರೆಯಲಾಗಿದೆ.

ಭಗವದ್ಗೀತೆ ಪ್ರಪಂಚದಾದ್ಯಂತ ಅನೇಕ ದಾಖಲೆಗಳನ್ನು ಹೊಂದಿದೆ. ಇದಕ್ಕೆ ಮತ್ತೊಂದು ದಾಖಲೆ ಸೇರಿಕೊಂಡಿದ್ದು, ಇಸ್ಕಾನ್ ಸಂಸ್ಥೆ ವಿಶ್ವದ ಅತಿ ದೊಡ್ಡ ಭಗವದ್ಗೀತೆ ಪುಸ್ತಕವನ್ನು ಹೊರತಂದಿದೆ. ಇಟಲಿಯ ಮಿಲನ್ ನಗರದಲ್ಲಿ ಈ ಬೃಹತ್ ಹೊತ್ತಗೆಯನ್ನು ಮುದ್ರಿಸಲಾಗಿದ್ದು ಇದು ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪುಸ್ತಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ಭಗವದ್ಗೀತೆ ಪುಸ್ತಕದ ತೂಕ ಬರೊಬ್ಬರಿ 800 ಕೆ.ಜಿ. ಇದ್ದು ಇದರ ತಯಾರಿಕೆಗೆ 1.5 ಕೋಟಿ ರೂ. ಖರ್ಚಾಗಿದೆ. ಇದರ ಮುದ್ರಣಕ್ಕೆ ತೆಗೆದುಕೊಂಡ ಸಮಯ ಸುಮಾರು ಒಂದೂವರೆ ವರ್ಷ ಎಂದರೆ ಅಚ್ಚರಿಯಾದೀತು. ಇಸ್ಕಾನ್ ಸಂಸ್ಥೆಯೊಂದಿಗೆ ವೇದಾಂತ ಬುಕ್ ಟ್ರಸ್ಟ್ ಇದನ್ನು ಮುದ್ರಿಸಿದೆ. ಹಾಗೆಯೇ ಪ್ರತಿ ಇಸ್ಕಾನ್ ಕೇಂದ್ರದಿಂದ ಮುದ್ರಣಕ್ಕೆ ಖರ್ಚು ಮಾಡಲಾಗಿದೆ.

ಗೀತಾ ಅಭಿಯಾನಕ್ಕೆ 50 ವರ್ಷ ಸಂದ ಹಿನ್ನೆಲೆ ಇದರ ಆಚರಣೆಯ ಭಾಗವಾಗಿ ಇಸ್ಕಾನ್ ಸಂಸ್ಥಾಪಕರಾದ ಸ್ವಾಮಿ ಪ್ರಭುಪಾದ ಅವರು ಪ್ರಕಟಿಸಿದ್ದು ಇದರ ವಿಶೇಷ. ಇಟಲಿಯಲ್ಲಿಯೂ ಸಹ ಇದೊಂದು ಆಕರ್ಷಣೆಯ ಕೇಂದ್ರವಾಗಿದೆ.

■ ಮುರಲೀಧರ ಕುಲಕರ್ಣಿ

